ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೨೭**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತಮೂರನೇ ಅಧಿವೇಶನ**
**(ಮುಂದುವರೆದ ಉಪವೇಶನಗಳು)**
**ಗುರುವಾರ, ದಿನಾಂಕ: ೧೬ನೇ ನವೆಂಬರ್, ೨೦೧೭**

---

**ಸಮೂಹ – IV**

೧. ಮುಖ್ಯಮಂತ್ರಿಗಳು.
೨. ಗೃಹ ಸಚಿವರು.
೩. ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು.
೪. ನಗರಾಭಿವೃದ್ಧಿ ಹಾಗೂ ಹಜ್ ಸಚಿವರು.
೫. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು.
೬. ಅಬಕಾರಿ ಸಚಿವರು.

---

## ಗಾಂಜಾ, ಅಫೀಮು ಮತ್ತು ಡ್ರಗ್ಸ್‌ಗಳ ಬಗ್ಗೆ

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೧ (೩೯೨) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರದಲ್ಲಿ ಇತೀಚೆಗೆ ಗಾಂಜಾ, ಅಫೀಮು ಮತ್ತು ಡ್ರಗ್ಸ್ ಹಾವಳಿ ಜಾಸ್ತಿಯಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಈ ಹಾವಳಿಯನ್ನು ತಡೆಯಲು ಏನು ಕ್ರಮ ಕೈಗೊಳ್ಳಲಾಗಿದೆ ;

(ಇ) ಈ ಡ್ರಗ್ಸ್ ಮಾಫಿಯಾಗೆ ಸುಮಾರು ೧೬ ರಿಂದ ೨೦ ವರ್ಷದವರನ್ನು ಗುರಿಯಾಗಿಸಿ ವಿದ್ಯಾರ್ಥಿಗಳನ್ನು ಹಾಳು ಮಾಡುತ್ತಿದ್ದು ಇದಕ್ಕೆ ಸರ್ಕಾರದ ಕ್ರಮವೇನು ;

(ಈ) ಇದುವರೆಗೆ ಎಷ್ಟು ಡ್ರಗ್ಸ್ ಮಾಫಿಯ ಅಪರಾಧಿಗಳನ್ನು ಬಂಧಿಸಿ ಕೇಸು ಹಾಕಲಾಗಿದೆ ;

(ಉ) ಈ ಹಾವಳಿಯಲ್ಲಿ ವಿದೇಶಿ ವಿದ್ಯಾರ್ಥಿಗಳ ಕೈವಾಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ರಾಯಚೂರು, ಮಾನ್ವಿ ನಗರಗಳಲ್ಲಿ ಕುಡಿಯುವ ನೀರಿನ ಯೋಜನೆಗಳ ಬಗ್ಗೆ

**ಶ್ರೀ ಎನ್.ಎಸ್. ಬೋಸ್‌ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೩೯೨ (೩೯೩೨) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ಕುಡಿಯುವ ನೀರಿಗಾಗಿ ಕೆರೆ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಆ) ರಾಯಚೂರು ನಗರದಲ್ಲಿ ೨೪X೭ ಕುಡಿಯುವ ನೀರಿನ ಯೋಜನೆಯನ್ನು ನಿಗದಿತ ಅವಧಿಯೊಳಗೆ ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ರಚನೆಯಾಗಿರುವ ೬ನೇ ವೇತನ ಆಯೋಗದ ಬಗ್ಗೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) –**

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) –**

೩೯೩ (೩೯೪೫+೩೯೪೮) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗಾಗಿ ರಚಿಸಲಾಗಿರುವ ೬ನೇ ವೇತನ ಆಯೋಗವನ್ನು ಯಾವಾಗ ರಚಿಸಲಾಯಿತು ; ಈ ಆಯೋಗಕ್ಕೆ ಸರ್ಕಾರ ನೀಡಿದ್ದ ಕಾಲಾವಧಿ ಎಷ್ಟು ;

(ಆ) ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ನಡುವೆ ವೇತನ ಭಾರಿ ಪ್ರಮಾಣದ ವ್ಯತ್ಯಾಸ ಇರುವುದು ಸರ್ಕಾರದ ಗಮನದಲ್ಲಿ ಇದೆಯೇ ; ಇದ್ದಲ್ಲಿ, ತಾರತಮ್ಯ ನಿವಾರಣೆಗೆ ಸರ್ಕಾರದ ಕ್ರಮ ಏನು ;

(ಇ) ೬ನೇ ವೇತನ ಆಯೋಗವು ವರದಿ ನೀಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಆಯೋಗದ ವರದಿಯನ್ನು ಯಾವಾಗ ಜಾರಿಗೆ ತರಲಾಗುವುದು ;

(ಉ) ವರದಿ ಜಾರಿಗೆ ವಿಳಂಬವಾಗುತ್ತಿರುವುದರಿಂದ ರಾಜ್ಯ ಸರ್ಕಾರಿ ನೌಕರರಿಗೆ ಮಧ್ಯಂತರ ಪರಿಹಾರವನ್ನು ನೀಡಲು ಸರ್ಕಾರ ಮುಂದಾಗಿದೆಯೇ ; (ವಿವರ ನೀಡುವುದು)

(ಊ) ಯಾವಾಗ ಎಷ್ಟು ಪ್ರಮಾಣದ ಮಧ್ಯಂತರ ಪರಿಹಾರವನ್ನು ನೀಡಲಾಗುವುದು;

(ಋ) ಆದಷ್ಟು ಬೇಗ ವೇತನ ಆಯೋಗದ ವರದಿಯನ್ನು ಜಾರಿಗೆ ತರಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಮಳೆ ನೀರಿನ ಸಂಗ್ರಹದ ಬಗ್ಗೆ

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭೆಯಿಂದ ಚುನಾಯಿತರಾದವರು) –**

೩೯೪ (೩೮೩೫) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪ್ರಸ್ತುತ ಬೆಂಗಳೂರಿನಲ್ಲಿ ಬಿದ್ದ ಭಾರಿ ಮಳೆ ನೀರನ್ನು ಸಂಗ್ರಹಿಸಲಾಗಿದೆಯೇ;

(ಆ) ಈ ದಿಸೆಯಲ್ಲಿ ಬೆಂಗಳೂರು ಮತ್ತು ಇತರೆ ನಗರ ಪ್ರದೇಶಗಳಲ್ಲಿ ಮಳೆ ನೀರನ್ನು ಸಂಗ್ರಹಿಸಿಡಲು ರೂಪುರೇಷೆಗಳನ್ನು ತಯಾರಿಸಲಾಗಿದೆಯೇ ;

(ಇ) ತಯಾರಿಸಿದ್ದಲ್ಲಿ, ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ಮತ್ತು ಅನುಷ್ಠಾನ ಮಾಡುವುದು ಯಾವಾಗ ?

## ಕುಂದಾಪುರ ಪುರಸಭಾ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳಾದ ಒಳಚರಂಡಿ ವ್ಯವಸ್ಥೆ, ವಿದ್ಯುತ್ ಚಿತಾಗಾರ, ರಿಂಗ್ ರಸ್ತೆಗಳ ಬಗ್ಗೆ

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೫ (೪೦೧೭) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ (UGD) ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ಎಷ್ಟು ; ಕಾಮಗಾರಿಗಳವಾರು ಟೆಂಡರ್ ಮೊತ್ತವೆಷ್ಟು ; ಗುತ್ತಿಗೆಯನ್ನು ಪಡೆದ ಸಂಸ್ಥೆ ಯಾವುದು ; ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ ಮತ್ತು ಮುಕ್ತಾಯಕ್ಕೆ ಸೂಚಿತವಾದ ದಿನಾಂಕ ಯಾವುದು; ಮುಕ್ತಾಯಗೊಳಿಸದಿರಲು ಕಾರಣವೇನು ; (ಕಾಮಗಾರಿಯ ಟೆಂಡರ್ ಸಂಖ್ಯೆ ಮತ್ತು ದಿನಾಂಕ, ಇತ್ಯಾದಿ ಮಾಹಿತಿ ನೀಡುವುದು)

(ಆ) ಒಳಚರಂಡಿ ಕಾಮಗಾರಿಯು ಕಳಪೆ ಗುಣಮಟ್ಟದಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರದ ಕ್ರಮವೇನು ;

(ಇ) ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಜನರ ಬೇಡಿಕೆಯ ಮೇರೆಗೆ ವಿದ್ಯುತ್ ಚಿತಾಗಾರ ನಿರ್ಮಿಸಲು ಉದ್ದೇಶಿಸಲಾಗಿದೆಯೇ ; ಉದ್ದೇಶಿಸಿದ್ದರೆ, ಪ್ರಸ್ತಾವನೆಯು ಯಾವ ಹಂತದಲ್ಲಿದೆ ; ಅಂದಾಜು ಮೊತ್ತವೆಷ್ಟು ;

(ಈ) ಮೂರುಕಡೆ ನದಿ ಮತ್ತು ಸಮುದ್ರದಿಂದ ಮತ್ತೊಂದು ಕಡೆ ರಾಷ್ಟ್ರೀಯ ಹೆದ್ದಾರಿಯಿಂದ ಸುತ್ತುವರಿಯಲ್ಪಟ್ಟ ಕುಂದಾಪುರ ಪುರಸಭಾ ವ್ಯಾಪ್ತಿಯ ಜನರ ಬಹುದಿನದ ಅಗತ್ಯವಾದ ಬೇಡಿಕೆಯಾದ ರಿಂಗ್ ರಸ್ತೆಯ ಪ್ರಸ್ತಾವನೆಯು ಯಾವ ಹಂತದಲ್ಲಿದೆ ; ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚವೆಷ್ಟು; ಕಾಮಗಾರಿಯ ವಿಳಂಬಕ್ಕೆ ಕಾರಣವೇನು ?

## ಅಬಕಾರಿ ನಿರೀಕ್ಷಕರ ಕುರಿತು

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೬ (೩೯೪೬) ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ೨೦೧೬–೧೭ ಹಾಗೂ ೨೦೧೭–೧೮ನೇ ಸಾಲಿನಲ್ಲಿ ಎಷ್ಟು ಅಬಕಾರಿ ನಿರೀಕ್ಷಕರನ್ನು ಅಮಾನತ್ತುಗೊಳಿಸಲಾಗಿದೆ ; ಯಾವ ಯಾವ ಕಾರಣಕ್ಕೆ ಅಮಾನತ್ತುಗೊಳಿಸಲಾಗಿದೆ ; (ವಿವರ ನೀಡುವುದು)

(ಆ) ಅಬಕಾರಿ ಮದ್ಯದ ಗುರಿಯನ್ನು ಸಾಧಿಸದ ರಾಜ್ಯದ ಯಾವ ಯಾವ ಅಬಕಾರಿ ಅಧಿಕಾರಿಗಳ ಮೇಲೆ ದೋಷಾರೋಪಣ ಪಟ್ಟಿಯನ್ನು ಹೊರಿಸಲಾಗಿದೆ ; (ಜಿಲ್ಲಾವಾರು ಅಧಿಕಾರಿಗಳ ಹೆಸರು ಮತ್ತು ಅವರು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳಗಳ ವಿವರಣೆ ನೀಡುವುದು)

(ಇ) ರಾಜ್ಯದಲ್ಲಿ ೫ ವರ್ಷಕ್ಕಿಂತ ಹೆಚ್ಚು ಕಾಲ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲಾ ಅಬಕಾರಿ ಇಲಾಖೆಯ ಅಧಿಕಾರಿಗಳ ಜಿಲ್ಲಾವಾರು ಮಾಹಿತಿ ನೀಡುವುದು;

(ಈ) ರಾಜ್ಯದಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಗಳು ತಮ್ಮ ಸ್ವಂತ ಜಿಲ್ಲೆಯಲ್ಲಿ ಎಷ್ಟು ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ಏಕೆ ವರ್ಗಾವಣೆಗೊಂಡಿಲ್ಲ, ವಿವರ ನೀಡುವುದು ; (ಜಿಲ್ಲಾವಾರು ಅಧಿಕಾರಿ ಹೆಸರು, ಹುದ್ದೆ ಹಾಗೂ ಸ್ಥಳಗಳ ಸಂಪೂರ್ಣ ಮಾಹಿತಿ ನೀಡುವುದು)

(ಉ) ೨೦೧೬–೧೭ ಮತ್ತು ೨೦೧೭–೧೮ನೇ ಸಾಲಿನಲ್ಲಿ ಸರ್ಕಾರ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ನೀಡಿರುವ ಮದ್ಯದ ಗುರಿ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಊ) ಈ ರೀತಿ ಗುರಿ ನಿಗಧಿಪಡಿಸುವ ಅವಶ್ಯಕತೆ ಇದೆಯೇ ; ಇದ್ದಲ್ಲಿ, ಕಾರಣಗಳೇನು ? (ವಿವರ ನೀಡುವುದು)

## ವಿಜಯಪುರ ಮಹಾನಗರ ಪಾಲಿಕೆ ವ್ಯಾಪ್ತಿಯ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೩೯೭ (೩೮೦೭) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ವಿಜಯಪುರ ಮಹಾನಗರ ಪಾಲಿಕೆ ವ್ಯಾಪ್ತಿಗೆ ನಗರದ ಎಷ್ಟು ಕಿ.ಮೀ.ವರೆಗಿನ ಬಡಾವಣೆಗಳನ್ನು/ಕಾಲೋನಿಗಳನ್ನು ಒಳಪಡಿಸಲು ಸರ್ಕಾರ ಉದ್ದೇಶಿಸಿದೆ; (ವಿವರವಾದ ಮಾಹಿತಿ ನೀಡುವುದು)

(ಆ) ನಗರದ ವಾರ್ಡ್‌ಗಳ ಡೀಲಿಮಿಟೇಶನ್ ಪ್ರಕ್ರಿಯೆಯಿಂದ ಪಾಲಿಕೆಗೆ ಹೆಚ್ಚಿನ ವಾರ್ಡ್‌ಗಳನ್ನು ರಚಿಸಲಾಗುತ್ತಿದೆಯೇ ; ರಚಿಸಿದ್ದರೆ, ಎಷ್ಟು ವಾರ್ಡ್‌ಗಳು ಹೆಚ್ಚಾಗಲಿವೆ ;

(ಇ) ಈಗಾಗಲೇ ನಗರಕ್ಕೆ ಹೊಂದಿಕೊಂಡಂತಹ ಸೇನಾ ನಗರ, ಎನ್.ಜಿ.ಓ. ಕಾಲೋನಿ, ಕಬಾಡೆ ಕಾಲೋನಿ, ಟೀಚರ್ಸ್ ಕಾಲೋನಿ, ಸಿದ್ದಾರ್ಥ ನಗರ, ವಿಜಯ ಕಾಲೋನಿ ಇತ್ಯಾದಿ ಇವುಗಳು ಹಾಗೂ ತೊರವಿ ಗ್ರಾಮಪಂಚಾಯತಿಗೆ ಒಳಪಡುವುದರಿಂದ ಹೆಚ್ಚಿನ ಅನುದಾನದ ಕೊರತೆಯಿಂದ ಈ ಬಡಾವಣೆಗಳು ಅಭಿವೃದ್ಧಿಯಿಂದ ವಂಚಿತವಾಗಿದ್ದು, ಇವುಗಳನ್ನು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ; ಯಾವ ಕಾಲಮಿತಿಯೊಳಗೆ ಪಾಲಿಕೆ ವ್ಯಾಪ್ತಿಗೆ ಸೇರಿಸಲಾಗುವುದು ? (ಮಾಹಿತಿ ನೀಡುವುದು)

## ಬೆಂಗಳೂರು ನಗರ ಜಿಲ್ಲೆ, ಉತ್ತರ ತಾಲ್ಲೂಕು, ಗುಡ್ಡದಹಳ್ಳಿ ಸರ್ವೇ ನಂ.೧ರ ಬಗ್ಗೆ

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು) –**

೩೯೮ (೪೦೦೩) ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರಿನ ನಗರ ಜಿಲ್ಲೆ, ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಹೆಬ್ಬಾಳ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಗುಡ್ಡದಹಳ್ಳಿ ಗ್ರಾಮದ ಸರ್ವೆ ನಂ.೧ರಲ್ಲಿ ಬರುವ ಜಮೀನಿಗೆ ಪಾಲಿಕೆ TDR ನೀಡಿರುವುದು ನಿಜವೇ ; (ಸಂಪೂರ್ಣವಾದ ವಿವರ ನೀಡುವುದು)

(ಆ) ಸದರಿ ಜಮೀನು ಸರ್ಕಾರದ್ದೇ ಅಥವಾ ಖಾಸಗಿಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಈ ಜಮೀನನ್ನು ಕೊಳಗೇರಿ ಪ್ರದೇಶವೆಂದು ಘೋಷಿಸಲಾಗಿದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) TDR ನೀಡಿ ಸದರಿ ಜಮೀನಿನ ಪ್ರದೇಶಕ್ಕೆ Relinquish deedನ ನೋಂದಾವಣೆ ಮಾಡಿ ಸ್ವಾಧೀನಕ್ಕೆ ಪಡೆಯಲಾಗಿದೆಯೇ ; ಪಡೆದಿದ್ದಲ್ಲಿ, ಅದರ ಪ್ರತಿಯೊಂದಿಗೆ ಸಂಪೂರ್ಣವಾದ ಮಾಹಿತಿ ನೀಡುವುದು ;

(ಉ) TDR ನೀಡುವ ಪ್ರಸ್ತಾವನೆಯ ಸಂಪೂರ್ಣ ಮಾಹಿತಿ ನೀಡುವುದು ;

(ಊ) TDR ನೀಡಲು ಅಧಿಸೂಚನೆ ಹೊರಡಿಸಲಾಗಿದೆಯೇ ?(ಹೊರಡಿಸಿದ್ದಲ್ಲಿ, ಪ್ರತಿಯೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)

## ಹಾವೇರಿ ಜಿಲ್ಲೆಯಲ್ಲಿ ಇಲಾಖೆಯಿಂದ ಹಮ್ಮಿಕೊಂಡಿರುವ ಕಾಮಗಾರಿಗಳ ಬಗ್ಗೆ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು)–**

೩೯೯ (೩೮೮೧) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಾವೇರಿ ಜಿಲ್ಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ಹಮ್ಮಿಕೊಂಡಿರುವ ಕಾಮಗಾರಿಗಳು ಯಾವುವು ; (ವಿವರ ನೀಡುವುದು)

(ಆ) ಈ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು ; (ಕಾಮಗಾರಿವಾರು ವಿವರ ನೀಡುವುದು)

(ಇ) ಆ ಪೈಕಿ ಪೂರ್ಣಗೊಂಡಿರುವ ಕಾಮಗಾರಿಗಳು ಎಷ್ಟು ; ಅವು ಯಾವುವು; (ಕಾಮಗಾರಿವಾರು ಖರ್ಚಾದ ಮೊತ್ತದ ಸಹಿತ ವಿವರ ನೀಡುವುದು)

(ಈ) ಹಾವೇರಿ ಜಿಲ್ಲೆಯಲ್ಲಿ ನಗರಾಭಿವೃದ್ಧಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಆಧಾರ್ ಕಾರ್ಡ್ ಬಗ್ಗೆ

**ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) –**

೪೦೦ (೩೯೮೧) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ದಿನಾಂಕ: ೦೧.೧೧.೨೦೧೭ರವರೆಗೆ ಎಷ್ಟು ಜನರಿಗೆ ಆಧಾರ್ ಗುರುತಿನ ಪತ್ರ ನೀಡಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಆಧಾರ್ ಗುರುತಿನ ಪತ್ರ ಪಡೆಯದೆ ಇರುವವರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಬಿ.ಪಿ.ಎಲ್. ಕಾರ್ಡ್ ಹೊಂದಿದ ಬಡವರು ಆಧಾರ್ ಕಾರ್ಡ್ ಮಾಡಿಸಿದರೆ ೧೦೦ ರೂ. ಪ್ರೋತ್ಸಾಹಧನ ನೀಡುವ ಯೋಜನೆಯಿರುವುದು ನಿಜವೇ ;

(ಈ) ಹಾಗಾದರೆ, ಬಿ.ಪಿ.ಎಲ್.ಕಾರ್ಡ್ ಹೊಂದಿದ ಬಡವರಿಗೆ ೧೦೦ ರೂ. ಪ್ರೋತ್ಸಾಹಧನ ನೀಡಲಾಗಿದೆಯೇ ;

(ಉ) ಇಲ್ಲವಾದರೆ, ನೀಡದಿರಲು ಕಾರಣಗಳೇನು ;

(ಊ) ಇಲ್ಲಿಯವರೆಗೆ ಆಧಾರ್ ಗುರುತಿನ ಪತ್ರ ನೀಡುವ ಸಂಬಂಧ ಖರ್ಚು ಮಾಡಿದ ಹಣ ಎಷ್ಟು ? (ವಿವರವಾಗಿ ಮಾಹಿತಿ ನೀಡುವುದು)

## ಬೀಳಗಿ ಪಟ್ಟಣದ ಯು.ಜಿ.ಡಿ. ಕಾಮಗಾರಿಯ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೪೦೧ (೩೮೧೯) ನಗರಾಭಿವೃದ್ಧಿ ಹಾಗೂ ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಾಗಲಕೋಟೆ ಜಿಲ್ಲೆಯ ಬೀಳಗಿ ಪಟ್ಟಣಕ್ಕೆ ಒಳಚರಂಡಿ (ಯು.ಜಿ.ಡಿ.) ಯೋಜನೆ ಯಾವ ಸಾಲಿನಲ್ಲಿ ಮಂಜೂರಾಗಿದೆ ; (ದಿನಾಂಕ ಸಹಿತ ವಿವರ ನೀಡುವುದು)

(ಆ) ಈ ಯೋಜನೆಗೆ ಮಂಜೂರಾದ ಅನುದಾನವೆಷ್ಟು ; ಈ ಯೋಜನೆಯ ಕಾಮಗಾರಿ ಮಂದಗತಿಯಲ್ಲಿ ಸಾಗಲು ಕಾರಣವೇನು ; (ಯೋಜನಾವಾರು ವಿವರ ನೀಡುವುದು)

(ಇ) ಸದರಿ ಕಾಮಗಾರಿ ಕಳಪೆಯಿಂದ ಕೂಡಿರುವ ಬಗ್ಗೆ ಸಾರ್ವಜನಿಕ ಆಕ್ಷೇಪಣೆಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಚಿಲ್ಲರೆ ಮದ್ಯ ಮಾರಾಟ ಮಳಿಗೆ ಮತ್ತು ಐ.ಎಂ.ಎಫ್.ಎಲ್. ಮಾರಾಟ ಮಳಿಗೆಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೪೦೨ (೩೯೫೪) ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಯಾವ ಯಾವ ಗ್ರಾಮ, ಪಟ್ಟಣ ಮತ್ತು ನಗರಗಳಲ್ಲಿ ಸಿ.ಎಲ್.–೨ (ಚಿಲ್ಲರೆ ಮಾರಾಟ ಮಳಿಗೆ) ಮದ್ಯ ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ ; ಅವುಗಳ ಗುತ್ತಿಗೆದಾರರು ಯಾರು ; (ಹೆಸರು, ವಿಳಾಸ ಸಹಿತ ವಿವರ ನೀಡುವುದು)

(ಆ) ಭಾರತೀಯ ತಯಾರಿಕಾ ವಿದೇಶಿ ಮದ್ಯ (Indian Manufacture Foreign Liquor) ವನ್ನು ಯಾವ ಯಾವ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ ; ಪ್ರತಿ ತಿಂಗಳು ಎಷ್ಟು ಪ್ರಮಾಣದ ಮದ್ಯವನ್ನು ಮಾರಾಟ ಮಾಡಲಾಗುತ್ತಿದೆ ; (ಮಳಿಗೆವಾರು ವಿವರ ನೀಡುವುದು)

(ಇ) ಭಾ.ತ.ವಿ.ಮ. (I.M.F.L.) ಮಾರಾಟ ಮಾಡುವ ಸನ್ನದುದಾರರಿಗೆ ದೊರೆಯಬಹುದಾದ ಕಮಿಷನ್ ಮೊತ್ತವೆಷ್ಟು ? (ಮಳಿಗೆವಾರು ವಿವರ ನೀಡುವುದು)

## ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿನ ಅವ್ಯವಾರಗಳ ಬಗ್ಗೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) –**

೪೦೩ (೩೯೩+೩೯೮೪) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೇಂದ್ರ ಕಾರಾಗೃಹದಲ್ಲಿ ಅಕ್ರಮ ವ್ಯವಹಾರಗಳು ಬಹಿರಂಗವಾಗಿದ್ದು ನಿಜವೇ; ಬಹಿರಂಗವಾಗಿದ್ದರೆ, ಅವುಗಳು ಯಾವುವು ;

(ಆ) ಹಾಗಿದ್ದಲ್ಲಿ, ಅದನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಇ) ಪರಪ್ಪನ ಅಗ್ರಹಾರದಲ್ಲಿ ಮಹಿಳಾ ಖೈದಿಗಳಿಗೆ ಬೇರೆ ಬೇರೆ ರೀತಿಯಿಂದ ಅವ್ಯವಹಾರವಾಗಿ ಅವರ ಮೇಲೆ ಲೈಂಗಿಕ ಕಿರುಕುಳ ನಡೆಯುತ್ತಿರುವುದು ನಿಜವೇ ;

(ಈ) ಜೈಲಿನಲ್ಲಿರುವ ಖೈದಿಗಳಿಗೆ ಗಾಂಜಾ, ಮಧ್ಯ, ರಿವಾಲ್ವಾರ್, ಮೊಬೈಲ್ ಸಿಮ್ ಕಾರ್ಡ್ ಇವೆಲ್ಲವೂ ಅವ್ಯಾಹತವಾಗಿ ದೊರೆಯುತ್ತಿರುವುದು ನಿಜವೇ ; ನಿಜವಾಗಿದ್ದಲ್ಲಿ, ಜೈಲಿನ ಒಳಗೆ ಹೇಗೆ ಅಕ್ರಮ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ ; (ವಿವರ ನೀಡುವುದು)

(ಉ) ಜೈಲಿನಲ್ಲಿ ಅಕ್ರಮಗಳ ತನಿಖೆಯನ್ನು ನಡೆಸಲಾಗುತ್ತಿದೆಯೇ ; ಸರ್ಕಾರವು ಯಾರ ನೇತೃತ್ವದಲ್ಲಿ ತನಿಖೆಯನ್ನು ನಡೆಸುತ್ತಿದೆ ; ಈ ತನಿಖೆಯು ಯಾವ ಹಂತದಲ್ಲಿದೆ ; ಇದು ಯಾವ ಕಾಲಮಿತಿಯಲ್ಲಿ ಪೂರ್ಣಗೊಳ್ಳಲಿದೆ ; (ವಿವರ ನೀಡುವುದು)

(ಊ) ಜೈಲುಗಳ ನಿರ್ವಹಣೆಗೆ ಸರ್ಕಾರವು ವಾರ್ಷಿಕ ಎಷ್ಟು ಅನುದಾನ ನೀಡುತ್ತಿದೆ; (ಕಳೆದ ಮೂರು ವರ್ಷಗಳ ವಿವರ ಒದಗಿಸುವುದು) ಪರಪ್ಪನ ಅಗ್ರಹಾರದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳು ಯಾರ್ಯಾರು ; (ಸಂಪೂರ್ಣ ಮಾಹಿತಿ ನೀಡುವುದು)

(ಋ) ಡಿ.ಐ.ಜಿ. ರೂಪಾ ಅವರು ಇಲ್ಲಿ ನಡೆಯುತ್ತಿರುವ ಎಲ್ಲಾ ಅವ್ಯವಹಾರಗಳ ಬಗ್ಗೆ ಸರ್ಕಾರಕ್ಕೆ ವರದಿ ಕೊಟ್ಟಿರುವುದು ನಿಜವೇ ; ಕೊಟ್ಟಿದ್ದರೆ, ಅದರ ಮುಖ್ಯಾಂಶಗಳೇನು ಹಾಗೂ ಸರ್ಕಾರ ಅದರ ಮೇಲೆ ತೆಗೆದುಕೊಂಡ ಕ್ರಮಗಳೇನು ?

## ಇಲಾಖಾವಾರು ಪ್ರಗತಿ ಪರಿಶೀಲನೆ ಬಗ್ಗೆ

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೪೦೪ (೩೮೧೩) ಮುಖ್ಯಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ –

ರಾಜ್ಯ ಸರ್ಕಾರದಲ್ಲಿ ಪ್ರಮುಖ ಹುದ್ದೆಗಳಲ್ಲಿ ಇರುವ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಅಥವಾ ಐಎಎಸ್, ಐಪಿಎಸ್ ಶ್ರೇಣಿಯ ಅಧಿಕಾರಿಗಳು ಇಲಾಖಾವಾರು ಪ್ರಗತಿ ಪರಿಶೀಲನೆ ನಡೆಸುವುದಕ್ಕಾಗಿ ಕಳೆದ ೬ ವರ್ಷಗಳಲ್ಲಿ ರಾಜ್ಯದಲ್ಲಿ ಎಲ್ಲೆಲ್ಲಿ ಪ್ರವಾಸ ಕೈಗೊಂಡಿರುತ್ತಾರೆ ? (ಇಲಾಖಾವಾರು, ಜಿಲ್ಲಾವಾರು ಮಾಹಿತಿ ಒದಗಿಸುವುದು)

# ಮೊದಲ ಮುಖ್ಯಮಂತ್ರಿಯಾದ ಕೆ.ಸಿ. ರೆಡ್ಡಿಯವರ ಪುತ್ಥಳಿ ಸ್ಥಾಪಿಸುವ ಕುರಿತು

**ಡಾ. ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೪೦೫ (೪೦೨೩) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕದ ಮೊದಲ ಮುಖ್ಯಮಂತ್ರಿಯಾದ ಕ್ಯಾಸಂಬಳ್ಳಿ ಚಂಗಲರಾಯ ರೆಡ್ಡಿ (ಕೆ.ಸಿ. ರೆಡ್ಡಿ) ಯವರ ಪುತ್ಥಳಿಯನ್ನು ವಿಧಾನಸೌಧದ ೬೦ನೇ ವರ್ಷದ ವಜ್ರಮಹೋತ್ಸವದ ನೆನಪಿಗಾಗಿ ವಿಧಾನಸೌಧದ ಆವರಣದಲ್ಲಿ ನಿರ್ಮಿಸಲು ಸರ್ಕಾರ ಚಿಂತಿಸುವುದೇ ;

(ಆ) ಕರ್ನಾಟಕದ ಜನರ ಏಳಿಗೆಗಾಗಿ ಅನೇಕ ಹೊಸ ಹೊಸ ರೀತಿಯ ಯೋಜನೆಗಳನ್ನು ನೀಡಿ ಜನರ ಆಶೋತ್ತರಗಳನ್ನು ಈಡೇರಿಸಿದ ಇಂತಹ ಗಣ್ಯವ್ಯಕ್ತಿಯನ್ನು ನೆನಪಿಸಿಕೊಂಡು ಅವರ ಸಾಧನೆಗಳನ್ನು ಯುವಪೀಳಿಗೆಗೆ ಪರಿಚಯಿಸಲು ಸರ್ಕಾರ ಕ್ರಮವಹಿಸುವುದೇ ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು.

ಸುವರ್ಣ ಸೌಧ, ಬೆಳಗಾವಿ, ಪಿ7, ಕಾ.ಸೂ. , ಪ್ರತಿಗಳು 1500